# ಮಿಷನ್ ಸಿಂಗಲ್ ನೇಷನ್!



**ನಾಳೆ ಸುಂದರವಾಗಿರುತ್ತದೆ ಎಂಬ ನಂಬಿಕೆಯ ಮೇಲೆಯೇ ನಮ್ಮ ಇಂದುಗಳು ರೂಪುಗೊಳ್ಳುತ್ತಿರುತ್ತವೆ. ಆದರೆ ಮನುಕುಲದ ನಾಳೆಗಳು ನಿಜಕ್ಕೂ ಸುಂದರವಾಗಿರುತ್ತವೆಯೇ?**

■ ಗೌರಿ

ಮನುಕುಲದ ಭವಿಷ್ಯ ಹೇಗಿರಬಹುದು? ಈ ಪ್ರಶ್ನೆಯನ್ನು ಪದೇ ಪದೇ ಕೇಳಿಕೊಳ್ಳುತ್ತಲೂ ಅದಕ್ಕೆ ಫ್ಯಾಂಟಸಿಯ ಉತ್ತರಗಳನ್ನು ನೀಡಿಕೊಳ್ಳುತ್ತಲೂ ಬರುತ್ತಿದ್ದೇವೆ. ಭವಿಷ್ಯದಲ್ಲಿ ಮನುಷ್ಯಕುಲದ ಆಧುನಿಕ ತಂತ್ರಜ್ಞಾನದ ಬದುಕಿನ ಬಗ್ಗೆ ಇಂಗ್ಲಿಷಿನಲ್ಲಿಯಂತೂ ಸಾಲು ಸಾಲು ಸಿನಿಮಾಗಳೇ ಬಂದಿದೆ. ಅವುಗಳಲ್ಲಿ ಬಹುತೇಕ ಚಿತ್ರಗಳು ತಂತ್ರಜ್ಞಾನದ ಪಾರಮ್ಯದಿಂದ ಮನುಷ್ಯ ಎಷ್ಟು ಮುಂದುವರಿಯಬಹುದು ಎಂಬ ಕಲ್ಪನೆಗೆ ಜೀವ ತುಂಬುವಂಥವು. ಆದರೆ ಇನ್ನು ಇಪ್ಪತ್ತು ವರ್ಷಕ್ಕೆ ನಿಜಕ್ಕೂ ನಾವು ಅಂದುಕೊಂಡ ಹಾಗೆ ಮುಂದುವರಿಯುತ್ತೇವೆಯೇ? 'ಹೌದು' ಎಂಬ ಮನುಷ್ಯನ ಅಹಂಕಾರಕ್ಕೆ ತಪರಾಕಿ ಕೊಡುವ ಹಾಗೆ ಇಡೀ ವಿಶ್ವವನ್ನು ಕೊರೊನಾ ಎಂಬ ಅಣುರೂಪಿ ವೈರಸ್ ಹೆಡೆಮುರಿ ಕಟ್ಟಿ ಕೆಡವಿದೆ. ನೆಲದತ್ತ ಕಣ್ಣುಹಾಯಿಸದೆ ಆಕಾಶ ನೋಡುತ್ತ ಮೈಮರೆತು ಓಡುತ್ತಿದ್ದ ಜಗತ್ತು, ಯಾರೋ ಅಡ್ಡಗಾಲು ಹಾಕಿದಂತೆ ಮುಗ್ಗರಿಸಿ ಬಿದ್ದು ನರಳುತ್ತಿದೆ. ಕಳೆದ ನಾಲ್ಕು ತಿಂಗಳುಗಳ ನಮ್ಮ ಪ್ರಯಾಣ ಮುಮ್ಮುಖವಾದದ್ದಲ್ಲ, ಬದಲಿಗೆ ಹಿಮ್ಮುಖವಾದದ್ದು. ಅಂದರೆ ಇನ್ನು ಇಪ್ಪತ್ತು ವರ್ಷಗಳ ನಂತರ ಏನಾಗಬಹುದು ಎಂಬುದನ್ನು ಏಕಮುಖವಾಗಿ ಹೇಗೆ ನಿಶ್ಚಯಿಸಬಹುದು?

ತಂತ್ರಜ್ಞಾನದ ಪಾರಮ್ಯದ ಕಲ್ಪನಾವಿಲಾಸಗಳ ಬಲೂನಿಗೆ ಸೂಜಿ ಚುಚ್ಚುವ ಪ್ರಯತ್ನವನ್ನು 'ಹೋಪ್' ಎಂಬ ಕಿರುಚಿತ್ರದ ಮೂಲಕ ಪಾರ್ಥಸಾರಥಿ ಮನ್ನಾ ಅವರು ಮಾಡಿದ್ದಾರೆ.

ಇದು 2040ರಲ್ಲಿ ನಡೆಯುವ ಕಥೆ. ಯಾವುದೋ ಬಾಂಬ್ ದಾಳಿಗೆ ನುಚ್ಚು ನೂರಾಗಿರುವಂಥ ಮನೆ ಅದು. ಕಲ್ಲಿದ್ದಲು ಗಣಿಯಲ್ಲಿ ಕೆಲಸ ಮಾಡಿ ಬಂದವರ ಹಾಗೆ ತೋರುವ ದಣಿದ ವೃದ್ಧ, ಅವನ ಮಗಳು, ಮತ್ತಿಬ್ಬರು ಮೊಮ್ಮಕ್ಕಳು ಅಲ್ಲಿದ್ದಾರೆ. ಹೊರನೋಡಿದರೆ ಪೂರ್ತಿ ಯುದ್ಧಭೂಮಿಯಂತೆ ಎಲ್ಲವೂ ಛಿದ್ರ ಛಿದ್ರವಾಗಿದೆ. ಅವರ ಮನೆ ಬಳಿಯಲ್ಲಿ 'ಎಚ್ಚರಿಕೆ! ಮಾನವ ವಲಯ' ಎಂಬ ಫಲಕ ಹಾಕಲಾಗಿದೆ. ಅದು ಭೂಮಿಯೋ ಚಂದ್ರಲೋಕವೋ ಎಂಬುದೂ ಸ್ಪಷ್ಟವಿಲ್ಲ. ರೇಡಿಯೊದಲ್ಲಿ ಬರುವ ವಾರ್ತೆಯಲ್ಲಿ, 'ಯಾರೂ ಮನೆಯಿಂದ ಹೊರಗೆ ಬರುವ ಹಾಗಿಲ್ಲ. ಹೊರಗೆ ಬಂದರೆ ಗುಂಡಿಕ್ಕಿ ಕೊಲ್ಲಲಾಗುವುದು' ಎಂಬ ಆದೇಶ ಪ್ರಕಟವಾಗುತ್ತಿರುತ್ತದೆ.



**ಹೆಸರು:** ಹೋಪ್ (ಹಿಂದಿ)
**ನಿರ್ದೇಶನ:** ಪಾರ್ಥ ಸಾರತಿ ಮನ್ನಾ
**ನಿರ್ಮಾಣ:** ಕಲಿಕಿಂಕರ್ ಡೇ
**ಛಾಯಾಗ್ರಹಣ:** ಪ್ರಮಿತ್ ದಾಸ್
**ಸಂಕಲನ:** ಸಾದಿಕ್, ಇಕ್ಬಾಲ್
**ಧ್ವನಿ ವಿನ್ಯಾಸ:** ಆಮಿತ್ ಕುಮಾರ್ ದತ್ತ
**ತಾರಾಗಣ:** ಅವಿನಾಶ್ ರೈ, ಸ್ನೇಹಾ ಬಿಸ್ವಾಸ್, ತಪನ್ ದಾಸ್, ತ್ರಿಶಾ ಪಲ್

ಆ ಮನೆಯ ಯಜಮಾನ 'ಜಾಗತಿಕ ಸರ್ಕಾರ'ದ ಸೈನ್ಯದಲ್ಲಿದ್ದಾನೆ. 'ಮಿಷನ್ ಸಿಂಗಲ್ ನೇಷನ್' ಮೂಲಕ ಇಡೀ ಭೂಮಿಯನ್ನು ವಶಪಡಿಸಿಕೊಳ್ಳುವ ಕಾರ್ಯಾಚರಣೆಯ ಭಾಗ ಅವನು. ಆ ಮನೆಯಲ್ಲಿನ ನೀರು, ಗಾಳಿ, ವಿದ್ಯುತ್ ಎಲ್ಲವೂ ನಿಗದಿತ. ಮನೆಯಿಂದ ಹೊರಗೆ ಬರಬೇಕು ಎಂದರೆ ವಾಯುಶುದ್ಧೀಕರಣದ ಯಂತ್ರವನ್ನು ಮುಖಕ್ಕೆ ಅಳವಡಿಸಿಕೊಂಡೇ ಬರಬೇಕು.

ಇಂಥ ವಾತಾವರಣದಲ್ಲಿ ಕ್ಯಾನ್ ತನ್ನ ತಂಗಿ ಕ್ಯಾರಾಳ ಹುಟ್ಟುಹಬ್ಬವನ್ನು ಆಚರಿಸುತ್ತಾನೆ. 'ನಿನಗೆ ಹುಟ್ಟುಹಬ್ಬಕ್ಕೆ ಏನು ಉಡುಗೊರೆ ಬೇಕು?' ಎಂದು ಕೇಳಿದರೆ ಅವಳು ಒಂದು ಪುಸ್ತಕ ತೋರಿಸುತ್ತಾಳೆ. ಅದರಲ್ಲಿ 'ಬರ್ಡ್ಸ್' ಎಂದಿರುತ್ತದೆ. ಇಡೀ ಜಗತ್ತೇ ಸ್ಮಶಾನವಾಗಿರುವಾಗ, ಮನೆಯಿಂದ ಹೊರಬಿದ್ದರೆ ಗುಂಡಿಕ್ಕಿ ಕೊಲ್ಲುವ ಆದೇಶ ಇರುವಾಗ ಹಕ್ಕಿಯನ್ನು ಹುಡುಕಿ ತರುವುದು ಹೇಗೆ? ಆದರೂ ತಂಗಿಗೆ ನಿರಾಸೆ ಮಾಡಬಾರದು ಎಂಬ ಕಾರಣಕ್ಕೆ ಹಕ್ಕಿಯನ್ನು ಹುಡುಕಿ ಕ್ಯಾನ್ ಹೊರಡುತ್ತಾರೆ. ಸುಮಾರು ಆರೆಂಟು ವರ್ಷದ ಆ ಹುಡುಗ ಮನೆಯಿಂದ ಹೊರಬೀಳುತ್ತಿರುವುದು ಅದೇ ಮೊದಲು!

ಕ್ಯಾನ್ ಹಕ್ಕಿಯನ್ನು ಹುಡುಕಿ ತರುತ್ತಾನಾ? ತಂಗಿಯನ್ನು ಖುಷಿಪಡಿಸುತ್ತಾನಾ ಎಂಬುದು ಈ ಕಥೆಯ ಎಳೆ. ಬಿರುಬೇಸಿಗೆಯ ಮರಳುಗಾಡಿನಲ್ಲಿ ಚಂದದ ಗುಲಾಬಿ ಹೂವೊಂದನ್ನು ಇಟ್ಟಂತಿರುವ ಈ ಕಥೆ ಭವಿಷ್ಯದಲ್ಲಿ ಎರಗಬಹುದಾದ ದಾರುಣ ಪರಿಸ್ಥಿತಿಯನ್ನು ತುಸು ಅತಿರೇಕದ ಧ್ವನಿಯಲ್ಲಿಯೇ ಕಾಣಿಸುತ್ತದೆ. ಆದರೆ ಈ ಜಗತ್ತಿನಲ್ಲಿ ಅತಿರೇಕ ಅಥವಾ ಅಸಂಭಾವ್ಯ ಎನ್ನುವಂತಹದ್ದು ಯಾವುದೂ ಇಲ್ಲ ಎನ್ನುವುದನ್ನು ಕೊರೊನಾ ತೋರಿಸಿಕೊಟ್ಟಿದೆ. ಈಗ ಆರು ತಿಂಗಳ ಹಿಂದೆ ನಾವ್ಯಾರಾದರೂ ಮೂರು ತಿಂಗಳ ಮನೆಯಿಂದ ಹೊರಗೇ ಬರದೆ ಉಳಿಯುತ್ತೇವೆ, ಲಕ್ಷಾಂತರ ಕಾರ್ಮಿಕರು ತಮ್ಮ ಮನೆ ತಲುಪಲು ಸಾವಿರಾರು ಕಿಲೋಮೀಟರ್ ನಡೆದೇ ಪಯಣಿಸುತ್ತಾರೆ ಎಂದು ಊಹಿಸಿದ್ದೆವೆ?

ಈ ಕಿರುಚಿತ್ರ ವೀಕ್ಷಣೆಗೆ bit.ly/3f7M5Tz ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.